ಸೊರಬ ತಾಲ್ಲೂಕಿನಲ್ಲಿ ಭೂಸರ್ವೆ ಕಾರ್ಯದಲ್ಲಿ ವಿಳಂಬ

19 (128)

ಶ್ರೀ ಎಸ್.ಕುಮಾರ್ ಬಂಗಾರಪ್ಪ (ಸೊರಬ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೊರಬ ತಾಲ್ಲೂಕಿನಲ್ಲಿ ಭೂಮಾಪಕರ ಕೊರತೆಯಿಂದ ಭೂ ಸರ್ವೆ ಕಾರ್ಯವು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ಹುದ್ದೆಗಳನ್ನು ತುಂಬಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿಗಳು):

ಅ) ಹೌದು.

ಆ) ಭೂದಾಖಲೆಗಳ ಸಹಾಯಕ ನಿರ್ದೇಶಕರ ಕಚೇರಿ, ಸಾಗರ ಇಲ್ಲಿ ಹಾಲಿ 20 ದ್ವಿತೀಯ ದರ್ಜೆ ಭೂಮಾಪಕರ ಹುದ್ದೆಗಳು ಖಾಲಿ ಇದ್ದು, ಸದರಿ ಹುದ್ದೆಗಳನ್ನು ತುಂಬಲು ಆಯ್ಕೆಯಾದ ಅಭ್ಯರ್ಥಿಗಳಿಗೆ ದಿನಾಂಕ 1.1.98ರಿಂದ ಸರ್ವೆ ತರಬೇತಿ ನೀಡಲಾಗುತ್ತಿದೆ. ತರಬೇತಿ ಪೂರ್ಣಗೊಂಡ ನಂತರ ಅವಶ್ಯವಿರುವ ಭೂಮಾಪಕರುಗಳನ್ನು ಸದರಿ ಕಚೇರಿಗೆ ನೇಮಕ ಮಾಡಲಾಗುವುದು.

ಗ್ರಾಮಾಂತರ ಪ್ರದೇಶಗಳಲ್ಲಿನ ವಿದ್ಯುತ್ ಸಮಸ್ಯೆ ಪರಿಹಾರ

20 (127)

ಶ್ರೀ ಎಸ್.ಕುಮಾರ್ ಬಂಗಾರಪ್ಪ (ಸೊರಬ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯುತ್ ಸಮಸ್ಯೆಯಿಂದ ರೈತರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದರೆ, ಈ ಸಮಸ್ಯೆಯನ್ನು ಪರಿಹರಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಶರಣಬಸಪ್ಪ ದರ್ಶಾನಾಪುರ (ಇಂಧನ ರಾಜ್ಯ ಸಚಿವರು):

ಅ) ಹೌದು.

ಆ) ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆಯನ್ನು ಗರಿಷ್ಠಗೊಳಿಸಲಾಗಿದೆ. ಅಲ್ಲದೇ ಕೇಂದ್ರ ಸರ್ಕಾರದ ವಿದ್ಯುತ್ ಉತ್ಪಾದನಾ ಕೇಂದ್ರಗಳಿಂದ ರಾಜ್ಯದ ವಿದ್ಯುತ್ ಪಾಲನ್ನು ಸಂಪೂರ್ಣವಾಗಿ ಪಡೆಯಲಾಗುತ್ತಿದೆ. ನೆರೆರಾಜ್ಯವಾದ ಮಹಾರಾಷ್ಟ್ರದಿಂದ ವಿದ್ಯುತ್ ನೆರವನ್ನು ಪಡೆಯಲು ಪ್ರಯತ್ನಿಸಲಾಗುತ್ತಿದೆ.

ಸೊರಬ ತಾಲ್ಲೂಕಿನಲ್ಲಿರುವ ಕೆರೆಗಳ ದುರಸ್ಥಿ.

21 (129)

ಶ್ರೀ ಎಸ್.ಕುಮಾರ್ ಬಂಗಾರಪ್ಪ (ಸೊರಬ): ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೊರಬ ತಾಲ್ಲೂಕಿನಲ್ಲಿ 1997ರ ಅತಿವೃಷ್ಟಿ ಮಳೆಯಿಂದಾಗಿ ಒಡೆದುಹೋದ ಕೆರೆಗಳು ಎಷ್ಟು?

ಆ) ಸದರಿ ಕೆರೆಗಳ ದುರಸ್ಥಿಗಾಗಿ ಸರ್ಕಾರದವರು ಮಂಜೂರು ಮಾಡಿದ ಹಣವೆಷ್ಟು? ಹಾಗೂ ಖರ್ಚಾಗಿದ್ದ ಹಣವೆಷ್ಟು?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು):

ಅ) 16 ಕೆರೆಗಳು.

ಆ) ಶಿವಮೊಗ್ಗ ಜಿಲ್ಲೆಯ ಜಿಲ್ಲಾಧಿಕಾರಿಗಳಿಂದ 6.70 ಲಕ್ಷ ಅನುದಾನವನ್ನು ಹಾಗೂ ಅಧೀಕ್ಷಕ ಇಂಜಿನಿಯರ್ ಸಣ್ಣ ನೀರಾವರಿ ವೃತ್ತ, ಬೆಂಗಳೂರು, ಇವರಿಂದ 2.44 ಲಕ್ಷ ರೂ. ಒಟ್ಟು 9.14 ಲಕ್ಷ ರೂ.ಗಳು ಅನುದಾನವನ್ನು ಹಾನಿಗೊಳಪಟ್ಟ ಮತ್ತು ಒಡೆದುಹೋದ ಕೆರೆಗಳ ದುರಸ್ತಿಕಾರ್ಯಕ್ಕೆ ಒದಗಿಸಲಾಗಿದೆ. ಇದರಲ್ಲಿ 2.70 ಲಕ್ಷ ರೂ.ಗಳು ಖರ್ಚಾಗಿದೆ. ದುರಸ್ತಿ ಕಾರ್ಯ ಪ್ರಗತಿಯಲ್ಲಿದೆ.

ಮೈಸೂರು ನರಸಿಂಹ ರಾಜ ಕ್ಷೇತ್ರದಲ್ಲಿ ಅಸಮರ್ಪಕ ವಿದ್ಯುತ್ ಸರಬರಾಜು

22 (56)

ಶ್ರೀ ಇ.ಮಾರುತಿ ರಾವ್ ಪವಾರ್ (ನರಸಿಂಹರಾಜ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನರಸಿಂಹರಾಜ ಕ್ಷೇತ್ರದ ಗಾಂಧಿನಗರ, ಕರುಣಾಪುರ ವ್ಯಾಪ್ತಿಗೆ ಟಿ.ನರಸೀಪುರದಿಂದ ಬರುವ ವಿದ್ಯುತ್ ಲೈನ್‌ನಿಂದ ಸರಬರಾಜು ಆಗುತ್ತಿದ್ದು ನಾರ್ತ್ ಈಸ್ಟ್ ಆಫ್ ಎನ್.ಆರ್.ಮೊಹಲ್ಲಾ ಪವರ್ ಹೌಸ್ ಅತೀ ಸಮೀಪವಿದ್ದು ಇದರಿಂದ